**ಕಾರ್ಯದರ್ಶಿ ಹಾಗೂ ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಘಟಕ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-2.**

**ದೂರವಾಣಿ : 080-22483434**

ಸಂಖ್ಯೆ: ಶಿಕನಿ/09/ಆ2/ಉ.ವ್ಯಾ/21/2017-18 ದಿನಾಂಕ 14.09.2017

## ಸುತ್ತೋಲೆ

ವಿಷಯ: 2017-18 ನೇ ಸಾಲಿಗೆ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗ ಧನ ಸಹಾಯ ಮಂಜೂರು ಮಾಡಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

* * *

2017-18ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ ಮಂಜೂರು ಮಾಡುವ ಸಲುವಾಗಿ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಘಟಕದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲದಿಂದ (www.schooleducation.kar.nic.in) ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅರ್ಹ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ತಮ್ಮ ವ್ಯಾಪ್ತಿಯ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ನಿಧಿಗಳ ಕಛೇರಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಿದೆ. ಅರ್ಜಿಗಳನ್ನು ಸಕಾಲದಲ್ಲಿ ನಿಧಿಗಳ ಕಛೇರಿಗೆ ಸಲ್ಲಿಸುವ ಜವಾಬ್ದಾರಿ ಆಯಾ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳವರದಾಗಿರುತ್ತದೆ.

ಪದವಿ ಪೂರ್ವ ಕಾಲೇಜು ಹಾಗೂ ಅದಕ್ಕೂ ಮೇಲ್ಪಟ್ಟ ವಿದ್ಯಾಸಂಸ್ಥೆಗಳ ಪ್ರಾಚಾರ್ಯರು / ಉಪನ್ಯಾಸಕರುಗಳು, ಅವರವರ ಮೇಲಾಧಿಕಾರಿಗಳ ಮುಖಾಂತರ ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿಗಳನ್ನು ಸಲ್ಲಿಸಲು ನಿಗಧಿ ಪಡಿಸಿರುವ ಅಂತಿಮ ದಿನಾಂಕ.31.10.2017 ಆಗಿದ್ದು ಆ ನಂತರ ಬರುವ ಅರ್ಜಿಗಳನ್ನು ಹಾಗೂ ಈ ಕೆಳಕಂಡ ನ್ಯೂನ್ಯತೆಗಳಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಪ್ರಕಟಣೆಯನ್ನು ಮತ್ತು ಅರ್ಜಿ ನಮೂನೆಯನ್ನು ಮೇಲ್ಕಂಡ www.schooleducation.kar.nic.in ಅಂತರ್ಜಾಲ ವಿಳಾಸದಿಂದ ಡೌನ್‌ಲೋಡ್ ಮಾಡಿಕೊಳ್ಳುವಂತೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಪ್ರಕಟಣಾ ಫಲಕದ ಮೇಲೆ ಕಡ್ಡಾಯವಾಗಿ ಪ್ರಕಟಿಸುವಂತೆ ಹಾಗೂ ವ್ಯಾಪಕ ಪ್ರಚಾರ ಮಾಡುವಂತೆ ತಿಳಿಸಿದೆ.

**ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ**

| | | |
|---|---|---|
| 1. | ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | – 31.10.2017 |
| 2. | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಸ್ವೀಕರಿಸಲಾದ ಎಲ್ಲಾ ಅರ್ಜಿಗಳನ್ನು ಕ್ರೋಢಿಕರಿಸಿ ನಿಧಿಗಳ ಕಛೇರಿಗೆ ತಲುಪಿಸಲು ಕೊನೆಯ ದಿನಾಂಕ | – 10.11.2017 |

( . . . 2 )

ಉನ್ನತ ವ್ಯಾಸಂಗದ ಧನಸಹಾಯದ ವಿವರ ಈ ಕೆಳಕಂಡಂತಿರುತ್ತದೆ.

| ವಿದ್ಯಾರ್ಥಿಯು ಓದುತ್ತಿರುವ ತರಗತಿ | ನೀಡಲಾಗುವ ಧನಸಹಾಯ |
|---|---|
| ಪಿ.ಯು.ಸಿ | ರೂ. 1,000/- |
| ಬಿ.ಎ./ಬಿ.ಎಸ್.ಸಿ/ಬಿಕಾಂ | ರೂ. 1,000/- |
| ಡಿಪ್ಲೊಮಾ | ರೂ. 1,000/- |
| ಬಿ.ಎಸ್.ಸಿ (ಅಗ್ರಿ) / ತತ್ಸಮಾನ | ರೂ. 1,500/- |
| ಬಿ.ಇ/ಎಂ.ಬಿ.ಬಿ.ಎಸ್ | ರೂ. 3,000/- |
| ಸ್ನಾತಕೋತ್ತರ ಪದವಿ (ಎಂ.ಎ, ಎಂಎಸ್‌ಸಿ, ಎಂಕಾಂ, ಎಂಬಿಎ, ಎಂ.ಟೆಕ್ ಇತರೆ) | ರೂ. 3,000/- |

**ಈ ಕೆಳಕಂಡ ನ್ಯೂನ್ಯತೆಗಳನ್ನೊಳಗೊಂಡ ಅರ್ಜಿಗಳನ್ನು ತಿರಸ್ಕರಿಸಲಾಗುವುದು:**

- ನಿಯಂತ್ರಣಾಧಿಕಾರಿಗಳ ಸಹಿ ಇಲ್ಲದೇ ನೇರವಾಗಿ ಶಿಕ್ಷಕರೇ ಸಲ್ಲಿಸಿದ ಅರ್ಜಿಗಳು (ನಿವೃತ್ತ ಶಿಕ್ಷಕರನ್ನು ಹೊರತು ಪಡಿಸಿ)
- ಆಜೀವ ಸದಸ್ಯತ್ವ ಪಡೆಯದ ಶಿಕ್ಷಕರು. (ಅಜೀವ ಸದಸ್ಯತ್ವದ ಕಾರ್ಡಿನ ದೃಢೀಕೃತ ನಕಲು ಪ್ರತಿ ಸಲ್ಲಿಸಬೇಕು)
- ಅರ್ಜಿಯಲ್ಲಿ ನಮೂದಾಗದೇ ಇರುವ ಕೋರ್ಸುಗಳು.
- ಶಿಕ್ಷಕರ ಸಹಿ ಇಲ್ಲದ ಅರ್ಜಿಗಳು.
- ನಿವೃತ್ತ / ಮೃತ ಶಿಕ್ಷಕರ ಪಿಂಚಣಿ ಪತ್ರ ಇಲ್ಲದಿರುವ ಅರ್ಜಿಗಳು.
- ಪತಿ/ ಪತ್ನಿ ಇಬ್ಬರೂ ಅರ್ಜಿಯನ್ನು ಸಲ್ಲಿಸಿದಲ್ಲಿ ಒಂದು ಅರ್ಜಿ ಮಾತ್ರ ಪರಿಗಣಿಸಲಾಗುವುದು.
- ತಿದ್ದುಪಡಿಗಳನ್ನು ಧೃಢೀಕರಿಸದ ಅರ್ಜಿಗಳು.
- ಪ್ರಸಕ್ತ ಸಾಲಿನಲ್ಲಿ ಶಿಕ್ಷಕರ ಮಕ್ಕಳು ವ್ಯಾಸಂಗ ಮಾಡದೇ ಇದ್ದರೂ ಧನಸಹಾಯಕ್ಕೆ ಸಲ್ಲಿಸಿದ ಅರ್ಜಿಗಳು
- ಅನುತ್ತೀರ್ಣ / ಸಂಜೆ ಕಾಲೇಜು ವ್ಯಾಸಂಗದ / ಖಾಸಗಿ/ಬಾಹ್ಯ/ ಮುಕ್ತ ವಿಶ್ವವಿದ್ಯಾಲಯದಲ್ಲಿನ ವ್ಯಾಸಂಗದ ಅರ್ಜಿಗಳು.
- ದ್ವಿಪ್ರತಿಯಲ್ಲಿ ಸಲ್ಲಿಸಿದ ಅರ್ಜಿಗಳು.
- ಸಹೋದರ/ಸಹೋದರಿ ಅಥವಾ ಪತಿ/ಪತ್ನಿ ವ್ಯಾಸಂಗಕ್ಕಾಗಿ ಸಲ್ಲಿಸಿದ ಅರ್ಜಿಗಳು.
- ಶಿಕ್ಷಕರಲ್ಲದವರ ಅರ್ಜಿಗಳು.
- ಅಪೂರ್ಣ ಅರ್ಜಿಗಳು.
- ತಡವಾಗಿ ಬಂದ ಅರ್ಜಿಗಳು.
- ವ್ಯಾಸಂಗ ಪ್ರಮಾಣ ಪತ್ರ ಸಲ್ಲಿಸದ ಅರ್ಜಿಗಳು.
- ಮೃತ ಶಿಕ್ಷಕರ ವಾರಸ್ಸುದಾರರ ಪ್ರಮಾಣ ಪತ್ರ ಹಾಗೂ ಮರಣ ಪ್ರಮಾಣ ಪತ್ರಗಳು ಇಲ್ಲದಿರುವ ಅರ್ಜಿಗಳು.
- ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಅರ್ಜಿಗಳು.

(ಹೆಚ್.ಆರ್.ಶಿವಪ್ಪ)
ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು

**ಪ್ರತಿಗಳನ್ನು:**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾ.ಶಿ.ಇ. ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ. ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.